# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 165 | Pages. 2 | Date: 06-05-2025, TUESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 165 - ಪುಟಗಳು : 2 - 06 ಮೇ 2025 ಮಂಗಳವಾರ Ph: 8762954248 ದರ : ₹1

# ಪರಿಶಿಷ್ಟ ಜಾತಿ ಗಣತಿಗೆ 1968 ಸಿಬ್ಬಂದಿ ನೇಮಕ

## ಇದು ಸಮೀಕ್ಷೆಯಷ್ಟೇ ಜಾತಿ ಪ್ರಮಾಣ ಪತ್ರವಲ್ಲ ಜಿಲ್ಲಾಧಿಕಾರಿ ಸತ್ಯಭಾಮ ಸ್ಪಷ್ಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ಮೇ 5 ರಿಂದ ಪ್ರಾರಂಭವಾಗಿದ್ದು, ಈ ಕಾರ್ಯಕ್ಕಾಗಿ ಜಿಲ್ಲೆಯಲ್ಲಿ 1968 ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಸೋಮವಾರ ಮಾತನಾಡಿದ ಅವರು, ಮೇ 17 ವರೆಗೆ ಜಿಲ್ಲೆಯಲ್ಲಿ ಗಣತಿ ಕಾರ್ಯ ನಡೆಯಲಿದೆ. ಗಣತಿದಾರರು ಮನೆ ಮನೆ ಭೇಟಿ ಮಾಡಿ ಮಾಹಿತಿ ಸಂಗ್ರಹಿಸುತ್ತಾರೆ.

ಮನೆ ಯಜಮಾನರುಆಧಾರ್ ಕಾರ್ಡ್ ಹಾಗೂ ಪಡಿತರ ಚೀಟಿಯನ್ನು ತೋರಿಸಿ ಅಗತ್ಯ ಮಾಹಿತಿ ನೀಡಬೇಕು ಎಂದರು. ಬೆಳಿಗ್ಗೆ 6.30 ರಿಂದ ಸಂಜೆ 6 ಗಂಟೆ ವರೆಗೆ ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ನಡೆಯಲಿದೆ. ಗೌರವಯುತವಾಗಿ, ಧೈರ್ಯವಾಗಿ ತಮ್ಮ ಜಾತಿ ಯಾವುದು ಎಂಬ ನಿಖರ ಮಾಹಿತಿ ನೀಡಬೇಕು. ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಜಾತಿಗಳನ್ನು ಉಪ ವರ್ಗೀಕರಣ ಮಾಡಿ ಒಳಮೀಸಲಾತಿಯನ್ನು ಜಾರಿ ಮಾಡಲು ಸರ್ಕಾರವು ನ್ಯಾ. ಹೆಚ್.ಎನ್. ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಏಕ ವ್ಯಕ್ತಿ ವಿಚಾರಣಾ ಆಯೋಗ ನೇಮಿಸಿ ಒಳಮೀಸಲಾತಿಯನ್ನು ವರ್ಗೀಕರಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಉಪ ವರ್ಗೀಕರಣ ಕೈಗೊಳ್ಳಲು ಅವಶ್ಯವಿರುವ ದತ್ತಾಂಶಗಳನ್ನು ಸಂಗ್ರಹಿಸಲು ಈ ಸಮೀಕ್ಷೆ ಕೈಗೊಳ್ಳಲಾಗಿದೆ.

ಪರಿಶಿಷ್ಟ ಜಾತಿಗೆ ಸೇರಿದ ಕುಟುಂಬಗಳು ಸಮೀಕ್ಷೆಯಿಂದ ಹೊರಗುಳಿಯದಂತೆ ನಿಗಾ ವಹಿಸಲು ಪ್ರತಿ ತಾಲ್ಲೂಕಿಗೂ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದು ಹೇಳಿದರು.




### ಸಹಾಯವಾಣಿ ಆರಂಭ

ಸಮೀಕ್ಷೆಯಲ್ಲಿ ತಾಂತ್ರಿಕ ತೊಂದರೆಗಳನ್ನು ಸರಿಪಡಿಸಲು ಪ್ರತಿ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರದಲ್ಲಿ ಕಂಟ್ರೋಲ್ ರೂಂ ತೆರೆಯಲಾಗಿದ್ದು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬೇಕು. ಸಮೀಕ್ಷಾ ಕಂಟ್ರೋಲ್‌ರೂಂ ಗಳ ದೂರವಾಣಿ ವಿವರ ಈ ಕೆಳಕಂಡಂತಿದೆ.ಆಲೂರು 08170-218467, 9480843140, ಅರಕಲಗೂಡು 9480843141, ಅರಸೀಕೆರೆ 9480843142, ಬೇಲೂರು 9480843143, ಚನ್ನರಾಯಪಟ್ಟಣ 9480843144, ಹಾಸನ 9480843145, ಹೊಳೆನರಸೀಪುರ 9480843146, ಸಕಲೇಶಪುರ 9480843147 ಇಲ್ಲಿಗೆ ಕರೆ ಮಾಡಬಹುದು ಎಂದರು.

### ಸಂಜೆ 6ರ ಬಳಿಕ ಆ್ಯಪ್ ಬಂದ್

ಸಮೀಕ್ಷೆಯು ಸಂಪೂರ್ಣ ಮೊಬೈಲ್ ಆ್ಯಪ್‌ನಿಂದ ಕೂಡಿರುತ್ತದೆ. ಜಿಲ್ಲೆಯಲ್ಲಿ 1968 ಮತಗಟ್ಟೆಗಳಿದ್ದು, ಪ್ರತಿ ಮತಗಟ್ಟೆಗೆ ಶಿಕ್ಷಕರನ್ನು ನೇಮಕಾತಿ ಮಾಡಿ ಮನೆಗಳ ಸಮೀಕ್ಷೆ ಮಾಡಲಾಗುವುದು. 1968 ಗಣತಿದಾರರನ್ನು ನೇಮಕ ಮಾಡಿದೆ. ಯಾವುದಾದರೂ ಮತಗಟ್ಟೆಯಲ್ಲಿ ಪರಿಶಿಷ್ಟ ಜಾತಿಯ ಕುಟುಂಬಗಳು 150ಕ್ಕಿಂತ ಹೆಚ್ಚು ಇದ್ದರೆ ಹೆಚ್ಚುವರಿ ಗಣತಿದಾರರನ್ನು ನೇಮಿಸಲಾಗುವುದು ಎಂದರು.

ಪ್ರತಿ 10 ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರಂತೆ 200 ಸಿಬ್ಬಂದಿ ಮೇಲ್ವಿಚಾರಕರಾಗಿ ನೇಮಿಸಲಾಗಿದೆ. ಪ್ರತಿ ತಾಲ್ಲೂಕಿಗೆ ನೋಡಲ್ ಅಧಿಕಾರಿಗಳನ್ನಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ನೇಮಿಸಲಾಗಿದೆ. ಸಮೀಕ್ಷೆಯು 3 ಹಂತಗಳಲ್ಲಿ ನಡೆಯಲಿದೆ. ಸಂಜೆ 6 ಗಂಟೆಯ ನಂತರ ಸಮೀಕ್ಷೆಯ ತಂತ್ರಾಂಶ ಕಾರ್ಯ ನಿರ್ವಹಿಸುವುದಿಲ್ಲ.

ಎರಡನೇ ಹಂತದಲ್ಲಿ ಒಂದು ವೇಳೆ, ಸಮೀಕ್ಷಾದಾರರು ಮನೆಗೆ ಬಂದಂತಹ ಸಂದರ್ಭದಲ್ಲಿ ಮನೆಯವರು ಇಲ್ಲದಿದ್ದರೆ ಮೇ 19 ರಿಂದ ಮೇ 21ರ ವರೆಗೆ ಸಮೀಕ್ಷೆ ಬ್ಲಾಕ್‌ಗಳಲ್ಲಿ ಅಥವಾ ಮತಗಟ್ಟೆ ಕೇಂದ್ರಗಳ ಶಿಬಿರದಲ್ಲಿ ಮನೆ ಮನೆ ಭೇಟಿ ಅವಧಿಯಲ್ಲಿ ಬಿಟ್ಟು ಹೋದ ಪರಿಶಿಷ್ಟ ಜಾತಿಯ ಕುಟುಂಬಗಳ ಸಮೀಕ್ಷೆ ಕಾರ್ಯ ಕೈಗೊಳ್ಳಲಾಗುವುದು. ಮೂರನೇ ಹಂತದಲ್ಲಿ ಮನೆ ಮನೆ ಭೇಟಿ ಅವಧಿ ಹಾಗೂ ಶಿಬಿರಗಳಲ್ಲೂ ಸಮೀಕ್ಷೆಯಿಂದ ಬಿಟ್ಟುಹೋದಂತಹ ಪರಿಶಿಷ್ಟ ಜಾತಿಯ ಕುಟುಂಬಗಳು ಮೇ 19 ರಿಂದ 23ರ ವರೆಗೆ ವೆಬ್‌ಸೈಟ್‌ನಲ್ಲಿ ಸ್ವಯಂ ಘೋಷಿತವಾಗಿ ಆಧಾರ್ ಸಂಖ್ಯೆಯೊಡನೆ ಜಾತಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬಹುದು ಎಂದು ತಿಳಿಸಿದರು.

ಮನೆ ಮನೆಗೆ ಆಗಮಿಸುವ ಸಮೀಕ್ಷಾದಾರರಿಗೆ ಕುಟುಂಬದ ಮುಖ್ಯಸ್ಥ ಅಥವಾ ಜವಾಬ್ದಾರಿಯುತ ವ್ಯಕ್ತಿ ಅವಶ್ಯಕ ದಾಖಲೆಗಳಾದ ರೇಷನ್ ಕಾರ್ಡ್, ಆಧಾರ್ ಸಂಖ್ಯೆಯನ್ನು ಮುಂಚಿತವಾಗಿ ತೆಗೆದಿಟ್ಟುಕೊಂಡು ಸಮೀಕ್ಷಾದಾರರಿಗೆ ನೀಡುವ ಮೂಲಕ ಸಹಕರಿಸಬೇಕು. ಪರಿಶಿಷ್ಟ ಜಾತಿಯಲ್ಲಿಒಟ್ಟು 101 ಜಾತಿಗಳಿದ್ದು, 98 ಜಾತಿಗಳು ನೇರವಾಗಿ ಜಾತಿ ಹೆಸರುಗಳ ಮೂಲಕವೇ ದಾಖಲಾಗುತ್ತದೆ. ಆದಿ ಕರ್ನಾಟಕ, ಆದಿ ದ್ರಾವಿಡ ಹಾಗೂ ಆದಿ ಆಂಧ್ರ ಎಂದು ಜಾತಿಯ ಹೆಸರನ್ನು ಹೇಳುವ ಕುಟುಂಬಗಳು ಇವುಗಳ ಮೂಲ ಜಾತಿಯನ್ನುಕಡ್ಡಾಯವಾಗಿ ನಮೂದಿಸಬೇಕು ಎಂದರು.

ಸಮೀಕ್ಷೆಯಲ್ಲಿ ಮೂಲ ಜಾತಿಯನ್ನು ನಮೂದಿಸುವುದರ ಜೊತೆಗೆ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಯನ್ನು ಹೇಳುವುದು ಕೂಡ ಕಡ್ಡಾಯವಾಗಿರುತ್ತದೆ. ಉದಾಹರಣೆಗೆ ವೃತ್ತಿ (ಕುಲ ಕಸುಬು), ಶೈಕ್ಷಣಿಕ ವಿದ್ಯಾರ್ಹತೆ, ಜಮೀನಿನ ವಿವರ, ವಾರ್ಷಿಕ ಆದಾಯ, ಜಾನುವಾರುಗಳ ಸಂಖ್ಯೆ, ಸರ್ಕಾರಿ ಸೌಲಭ್ಯಗಳನ್ನು ಪಡೆದುಕೊಂಡಿರುವ ಬಗ್ಗೆ ವಿವರ, ಸ್ಥಿರ ಮತ್ತು ಚರಾಸ್ತಿ ವಿವರ, ಮನೆ ಹಾಗೂ ನಿವೇಶನ, ಕುಡಿಯುವ ನೀರಿನ ಮೂಲ, ಶೌಚಾಲಯ, ಅಡುಗೆಗೆ ಬಳಸುವ ಇಂಧನ, ರಾಜಕೀಯ ಸ್ಥಿತಿಗತಿ ಇತ್ಯಾದಿ ಕಡ್ಡಾಯವಾಗಿ ಮಾಹಿತಿ ನೀಡಬೇಕು. ಸಮೀಕ್ಷೆದಾರರು ಕೇಳುವ ಈ ಎಲ್ಲಾ ಪ್ರಶ್ನೆಗಳಿಗೆ ಸಾವಧಾನದಿಂದ ಉತ್ತರಿಸಬೇಕು. ನಂತರ ವಿವರವನ್ನು ನೀಡಿದವರು ಸ್ವಯಂ ದೃಢೀಕರಣ ಪ್ರಮಾಣ ಪತ್ರಕ್ಕೆ ಸಹಿ ಹಾಕಬೇಕು ಎಂದರು.

### ಸಮೀಕ್ಷೆಗಷ್ಟೇ ಸೀಮಿತ

ಸಮೀಕ್ಷೆಯಲ್ಲಿ ಘೋಷಿಸಿಕೊಳ್ಳುವ ಜಾತಿಯ ಹೆಸರು ಪರಿಶಿಷ್ಟ ಜಾತಿ ಸಮೀಕ್ಷೆಗೆ ಮಾತ್ರ. ಇದು ಜಾತಿ ಪ್ರಮಾಣ ಪತ್ರ ಪಡೆಯಲು ದೃಢೀಕರಣವಲ್ಲ. ಸಮೀಕ್ಷಾದಾರರು ಜಾತಿ ಪ್ರಮಾಣ ಪತ್ರವನ್ನು ನೀಡುವುದಿಲ್ಲ. ಹಾಸನದಲ್ಲಿ ನಡೆಯುವ ಪರಿಶಿಷ್ಟ ಜಾತಿ ಸಮೀಕ್ಷಾ ಕಾರ್ಯಕ್ಕೆ ಸಮುದಾಯದ ಎಲ್ಲಾ ಬಾಂಧವರು ಸಹಕರಿಸುವ ಮೂಲಕ ಯಶಸ್ವಿಗೊಳಿಸಬೇಕಾಗಿ ಕೋರಿದ್ದಾರೆ.

> ಜಾತಿ ಸಮೀಕ್ಷೆಗೆ ಒಳಗಾದ ಪ್ರತಿ ಕುಟುಂಬಕ್ಕೆ ಒಂದು ಅರ್ಜಿ ಸಂಖ್ಯೆ ಜನರೇಟ್ ಆಗಲಿದ್ದು, ಮೊಬೈಲ್ ಸಂಖ್ಯೆಗೆ ಒಟಿಪಿ ಬರುತ್ತದೆ. ಆ ಒಟಿಪಿಯನ್ನು ಹೇಳಿದ ಬಳಿಕ ಸಮೀಕ್ಷೆ ಪೂರ್ಣಗೊಳ್ಳುವುದು. ಆ ಅರ್ಜಿ ಸಂಖ್ಯೆಯನ್ನು ವೆಬ್‌ಸೈಟ್‌ನಲ್ಲಿ ನಮೂದು ಮಾಡುವ ಮೂಲಕ ತಾವು ಹೇಳಿರುವ ಮಾಹಿತಿಯನ್ನು ಪರಿಶೀಲಿಸಬಹುದು.
>
> - ಸಿ. ಸತ್ಯಭಾಮ, ಜಿಲ್ಲಾಧಿಕಾರಿ

# ಕಾಡೆಮ್ಮೆ ದಾಳಿಗೆ ವ್ಯಕ್ತಿ ಬಲಿ: ಆತಂಕ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಮಲೆನಾಡು ಭಾಗದ ಜನರಿಗೆ ಕಾಡು ಪ್ರಾಣಿಗಳ ಹಾವಳಿ ವಿಪರೀತವಾಗಿದ್ದು ಕಾಡೆಮ್ಮೆ ದಾಳಿಯಿಂದ ವ್ಯಕ್ತಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ತಿಮ್ಮಪ್ಪ (70) ಮೃತರು. ಕೂಲಿ ಕೆಲಸಕ್ಕೆ ಭಾನುವಾರ ತೆರಳಿದ್ದು ಸಂಜೆ ಮನೆಗೆ ಬರುತ್ತಿದ್ದಾಗ ಕಾಡೆಮ್ಮೆ ದಾಳಿ ಮಾಡಿವೆ. ತಪ್ಪಿಸಿಕೊಳ್ಳಲು ತಿಮ್ಮಪ್ಪ ಪ್ರಯತ್ನಿಸಿದರೂ ಸಾಧ್ಯವಾಗಿಲ್ಲ. ಬೇಲಿಯೊಳಗೆ ಅವಿತು ಕುಳಿತರು ಬಿಡದ ಕಾಡೆಮ್ಮೆ ಗುದ್ದಿ, ಕೊಂಬಿನಿಂದ ತೊಡೆಯನ್ನು ಸೀಳಿ ಸಾಯಿಸಿವೆ. ರಾತ್ರಿಯಾದರೂ ತಿಮ್ಮಪ್ಪ ಮನೆಗೆ ಬಾರದಿದ್ದರಿಂದ ಸೋಮವಾರ ಬೆಳಿಗ್ಗೆ ಕುಟುಂಬಸ್ಥರು ಹುಡುಕಾಟ ನಡೆಸಿದ್ದು ಪೊದೆಯೊಳಗೆ ಮೃತದೇಹ ಪತ್ತೆಯಾಗಿದೆ. ಕೂಡಲೇ ಪೊಲೀಸರು ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

### ಗ್ರಾಮಸ್ಥರ ಪ್ರತಿಭಟನೆ

ಕಾಡೆಮ್ಮೆ ದಾಳಿಯಿಂದ ವ್ಯಕ್ತಿ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಶಾಸಕ ಸಿಮೆಂಟ್ ಮಂಜು ಹಾಗೂ ಉನ್ನತ ಅಧಿಕಾರಿಗಳು ಬರುವವರೆಗೂ ಶವವನ್ನು ಎತ್ತುವುದಿಲ್ಲ ಎಂದು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಸ್ಥಳಕ್ಕೆ ಶಾಸಕ ಸಿಮೆಂಟ್ ಮಂಜು ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಸ್ಥಳಕ್ಕೆ ವೈದ್ಯರನ್ನು ಕರೆಸಿ ಮರಣೋತ್ತರ ಪರೀಕ್ಷೆ ಮಾಡಲಾಯಿತು. ನಂತರ ಶಾಸಕರು ಇಪ್ಪತ್ತು ಲಕ್ಷ ರೂ. ಪರಿಹಾರ ಚೆಕ್ ವಿತರಿಸಿದರು.

> ಕಾಡೆಮ್ಮೆ ಸಮಸ್ಯೆ ಮಲೆನಾಡು ಭಾಗದಲ್ಲಿ ಇದೆ. ಇಲ್ಲಿವರೆಗೆ ವ್ಯಕ್ತಿ ಮೇಲೆ ದಾಳಿ ಮಾಡಿರಲಿಲ್ಲ. ಚಿಕ್ಕಮಗಳೂರು ಭಾಗದಲ್ಲಿ ಕಾಡೆಮ್ಮೆಗಳ ಸಮಸ್ಯೆ ಇನ್ನು ಹೆಚ್ಚಿದ್ದು ಒಟ್ಟಾರೆಯಾಗಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ತುರ್ತು ಸಭೆ ಮಾಡಲಾಗುವುದು.
>
> - ಸೌರಭ್ ಕುಮಾರ್, ಡಿಎಫ್‌ಓ

> ಕಾಡಾನೆ ಸಮಸ್ಯೆ ಜೊತೆಗೆ ಕಾಡೆಮ್ಮೆಗಳ ಹಾವಳಿ ಸಹ ಈ ಭಾಗದಲ್ಲಿ ಉಂಟಾಗಿದೆ. ಕಾಡೆಮ್ಮೆ ಹಾಗೂ ಮಾನವ ಸಂಘರ್ಷದಿಂದ ಈ ಹಿಂದೆ ಹಲವು ನೋವುಗಳು ಉಂಟಾಗಿದ್ದು ಇದೇ ಮೊದಲ ಬಾರಿಗೆ ಸಾವು ಉಂಟಾಗಿದೆ.
>
> ಸರ್ಕಾರ ಬರಿ ಸಭೆ ಮಾಡಿದರೆ ಸಾಲದು ಸರ್ಕಾರ ಕೂಡಲೆ ಇತ್ತ ಗಮನವರಿಸಿ ಕಾಡೆಮ್ಮೆಗಳನ್ನು ಸ್ಥಳಾಂತರ ಮಾಡಲು ಮುಂದಾಗಬೇಕು.
>
> - ದೇವರಾಜು, ಕಾಫಿ ಬೆಳೆಗಾರ

# ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗೆ ರೈತ ಸಂಘ ಮುತ್ತಿಗೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಭೂ ಮಾಲೀಕರಿಗೆ ನೋಟೀಸ್ ನೀಡದೆ ಏಕಾಏಕಿ ಜಮೀನು ಹರಾಜಿಗೆ ಮುಂದಾಗಿದ್ದನ್ನು ಪ್ರಶ್ನಿಸಿದ್ದಕ್ಕೆ ಬ್ಯಾಂಕ್ ಅಧಿಕಾರಿಗಳು ರೈತನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ಎದುರು ರೈತ ಸಂಘದಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಕೆ.ಆರ್. ಪುರಂನಲ್ಲಿರುವ ಬ್ಯಾಂಕ್‌ಗೆ ಮುತ್ತಿಗೆ ಹಾಕಿದ ರೈತರು ರಸ್ತೆ ತಡೆ ನಡೆಸಿ ಕಚೇರಿಗೆ ಮುತ್ತಿಗೆ ಹಾಕಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಮಾತನಾಡಿ, ಬೇಲೂರು ತಾಲ್ಲೂಕು ಗೋಣಿಸೋಮೇನಹಳ್ಳಿ ಗ್ರಾಮದ ಶಿವಕುಮಾರ್ ಅಡಗೂರು ಶಾಖೆಯಲ್ಲಿ ಮಾಡಿದ್ದ ಸಾಲ ಪಾವತಿಸದ ಹಿನ್ನೆಲೆಯಲ್ಲಿ 15 ದಿನಗಳ ಹಿಂದೆ ಊರಿಗೆ ಬಂದಿದ್ದ ಬ್ಯಾಂಕ್ ಅಧಿಕಾರಿಗಳು ಜಮೀನು ಹರಾಜು ಹಾಕುವುದಾಗಿ ತಮಟೆ ಬಾರಿಸಿದ್ದರು. ಕಾನೂನು ಪ್ರಕ್ರಿಯೆ ಕುರಿತು ತಮಗೆ ಯಾವುದೇ ಮಾಹಿತಿ ನೀಡಿಲ್ಲವೆಂದು ಶಿವಕುಮಾರ ಪ್ರಶ್ನಿಸಿದಾಗ ಬ್ಯಾಂಕ್ ನೌಕರರು ದಬ್ಬಾಳಿಕೆ ನಡೆಸಿದ್ದಾರೆ. ಅವಾಚ್ಯ ಶಬ್ದಗಳಿಂದ ನಿಂದಿಸಿ ಚರಂಡಿಗೆ ನೂಕಿದ್ದರಿಂದ ಶಿವಕುಮಾರ್ ಅವರ ಕೈ ಮುರಿದಿದೆ. ಬ್ಯಾಂಕ್ ಅಧಿಕಾರಿಗಳ ದಬ್ಬಾಳಿಕೆಗೆ ತಕ್ಕ ಶಾಸ್ತಿ ಆಗಬೇಕು ಎಂದು ಒತ್ತಾಯಿಸಿದರು.



ಈ ಬಗ್ಗೆ ಬ್ಯಾಂಕ್ ಮೇಲಧಿಕಾರಿಗಳು ಸ್ಪಷ್ಟ ಉತ್ತರ ನೀಡಬೇಕು. ಸಾಲ ಮರುಪಾವತಿಸದಿದ್ದರೆ ಕೋರ್ಟ್ ಮೂಲಕ ಜಮೀನು ಹರಾಜು ಹಾಕುವುದಕ್ಕೆ ನಮ್ಮ ತಕರಾರಿಲ್ಲ. ಆದರೆ ಗುಂಡಾವರ್ತನೆ ಪ್ರದರ್ಶಿಸುವುದನ್ನು ಸಹಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಬಿಟ್ಟಗೌಡನಹಳ್ಳಿ ಮಂಜು, ಆಲದಹಳ್ಳಿ ಶಶಿಧರ್, ರಾಜಣ್ಣ, ಶಿವಕುಮಾರ್, ಸೋಮಶೇಖರ್, ಪಾಲಾಕ್ಷ, ಶಂಕರ್, ಮಂಜಣ್ಣ, ಮನು ಇತರರು ಇದ್ದರು.

# ಅಂಗನವಾಡಿ ನೌಕರರ ಮುಷ್ಕರ ಮೇ 20ಕ್ಕೆ




ಹಾಸನ: ಅಂಗನವಾಡಿ ನೌಕರರ ಸೇವೆ ಕಾಯಂ ಮಾಡುವ ವರೆಗೆ ಕನಿಷ್ಠ ವೇತನ ಜಾರಿಗೊಳಿಸಬೇಕು ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೇ 20 ರಂದು ನೌಕರರ ಮುಷ್ಕರ ಹಮ್ಮಿಕೊಳ್ಳಲಾಗಿದೆ ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಎಂ.ಬಿ. ಪುಷ್ಪ ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಸೋಮವಾರ ಮಾತನಾಡಿ, 50 ವರ್ಷಗಳಿಂದ ಅಂಗನವಾಡಿ ನೌಕರರು ಸಂಕಷ್ಟದಲ್ಲೇ ದುಡಿಯುತ್ತಿದ್ದಾರೆ. ಸಾಮಾಜಿಕ ನ್ಯಾಯದ ಹಿನ್ನಲೆಯಲ್ಲಿ ಸೇವೆಯನ್ನು ಕಾಯಂ ಮಾಡಬೇಕು. ಅಲ್ಲಿವರೆಗೆ ಕನಿಷ್ಠ ವೇತನ, ಫಲಾನುಭವಿಗಳ ಘಟಕ ವೆಚ್ಚ ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು.

ದೇಶದ 29 ಕಾರ್ಮಿಕ ಕಾನೂನುಗಳನ್ನು 4 ಸಂಹಿತೆಗಳನ್ನಾಗಿ ಮಾಡುವ ಮುಖಾಂತರ ಸಂಘ ಕಟ್ಟುವ ಹಕ್ಕು ಮತ್ತು ಮುಷ್ಕರದ ಹಕ್ಕುಗಳಿಗೆ ಹಲವು ರೀತಿಯ ನಿರ್ಬಂಧಗಳನ್ನು ಕೇಂದ್ರ ಸರ್ಕಾರ ಹೇರಿದೆ. ಪ್ರಶ್ನಿಸುವ ಹಕ್ಕನ್ನು ಕಸಿಯುವ ಕೆಲಸವಾಗಬಾರದು ಎಂದು ಒತ್ತಾಯಿಸಿದರು.

ಗುಜರಾತ್ ಹೈಕೋರ್ಟ್ ತೀರ್ಪಿನಂತೆ ಅಂಗನವಾಡಿ ನೌಕರರನ್ನು ಕಾಯಂ ಮಾಡಬೇಕು. 29 ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸಿ ಹೊಸದಾಗಿ ತಂದಿರುವ 4 ಸಂಹಿತೆಗಳನ್ನು ರದ್ದುಗೊಳಿಸಬೇಕು. ಕನಿಷ್ಠ 26 ಸಾವಿರ ರೂ. ವೇತನ, 10 ಸಾವಿರ ರೂ. ಮಾಸಿಕ ಪಿಂಚಣಿ ಕೊಡಬೇಕು. ಟಿಹೆಚ್‌ಆರ್ ಮೂಲಕ ಫಲಾನುಭವಿಗಳ ಪೋಷಣ್ ಟ್ರ್ಯಾಕರ್ ಕೆಲಸಗಳಲ್ಲಿ ಅಂಗನವಾಡಿ ನೌಕರರಿಗೆ ತೊಂದರೆ ಕೊಡಬಾರದು. 2011 ರಿಂದ ನಿವೃತ್ತರಾದ ಎಲ್ಲಾ ಕಾರ್ಯಕರ್ತೆ ಸಹಾಯಕಿಯರಿಗೆ ಗ್ರಾಚ್ಯುಟಿ ನೀಡಬೇಕು. ಈಗಾಗಲೇ ಬಿಡುಗಡೆ ಆದವರಿಗೆ ಗ್ರಾಚ್ಯುಟಿ ಲೆಕ್ಕಾಚಾರ ಪ್ರಕಾರ ನೀಡದೇ ಸಾವಿರಾರು ರೂ. ಕಡಿತ ಆಗಿರುವುದನ್ನು ವಾಪಸ್ ನೀಡಬೇಕು ಎಂದರು.

# ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಬೇಕಿದೆ ರಕ್ಷಣೆ

## ಮಿತಿ ಮೀರಿದ ಪುಂಡ ಪೋಕರಿಗಳ ಹಾವಳಿ ಎಲ್ಲೆಂದರಲ್ಲಿ ಮದ್ಯದ ಬಾಟಲಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಗಂಧದಕೋಠಿ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸುತ್ತಲೂ ಕುಡುಕರ ಹಾವಳಿ ಹೆಚ್ಚಾಗಿ ಪ್ರತಿದಿನವೂ ಮದ್ಯದ ಬಾಟಲಿ ಆಯಬೇಕಾದ ದುಸ್ಥಿತಿ ಸಿಬ್ಬಂದಿಗೆ ತಲೆನೋವಾಗಿ ಪರಿಣಮಿಸಿದೆ.

ಖಾಸಗಿ ಕಾಲೇಜುಗಳಿಗೆ ಯಾವುದರಲ್ಲೂ ಕಡಿಮೆ ಇಲ್ಲ ಎನ್ನುವಂತೆ ಸುಸಜ್ಜಿತ ಕಟ್ಟಡ, ಅಗತ್ಯ ಬೋಧಕ ಸಿಬ್ಬಂದಿ ಸೇರಿ ಎಲ್ಲಾ ಸೌಕರ್ಯಗಳನ್ನು ಕಾಲೇಜು ಹೊಂದಿದೆಯಾದರೂ ಆರ್.ಸಿ. ರಸ್ತೆ ಹಾಗೂ ಕಾಲೇಜು ಮುಂಭಾಗ ನಿರ್ಮಾಣವಾಗಿರುವ ಸಿಮೆಂಟ್ ರಸ್ತೆ ಕುಡುಕರ ತಾಣವಾಗಿ ಮಾರ್ಪಟ್ಟಿದೆ. ಕಾಲೇಜು ಮುಂಭಾಗದ ರಸ್ತೆಯಲ್ಲಿ ಈಗಷ್ಟೇ ಕಾಫಿ ಶಾಪ್, ಜೆರಾಕ್ಸ್ ಅಂಗಡಿಗಳು ತಲೆ ಎತ್ತಿದ್ದು ವಾಹನಗಳ ಸಂಖ್ಯೆ ವಿಪರೀತವಾಗಿದೆ. ಬೈಕ್ ವ್ಹೀಲಿಂಗ್ ಮಾಡುವವರ ಸಂಖ್ಯೆಯೂ ಹೆಚ್ಚಾಗಿದೆ. ಅಡ್ಡಾದಿಡ್ಡಿ ಬೈಕ್ ಹಾಗೂ ಕಾರು ನಿಲ್ಲಿಸುವುದರಿಂದ ವಿದ್ಯಾರ್ಥಿನಿಯರಿಗೆ ಭಾರಿ ಸಮಸ್ಯೆಯಾಗುತ್ತಿದೆ. ಸಂಜೆಯಾದರೆ ಸಾಕು ಪುಂಡ ಪೋಕರಿಗಳು ಕಾಲೇಜು ಮುಂಭಾಗದ ರಸ್ತೆಯಲ್ಲಿ ನಿಂತು ಮದ್ಯ ಸೇವಿಸುವುದು, ಜೋರಾಗಿ ಗಲಾಟೆ ಮಾಡುವುದೆಲ್ಲ ಮಾಡುತ್ತಾರೆ. ಬೆಳಿಗ್ಗೆ ಬರುವ ಡಿ ದರ್ಜೆ ನೌಕರರು ಮದ್ಯದ ಬಾಟಲಿಗಳನ್ನು ಸಂಗ್ರಹಿಸುವುದನ್ನೇ ಕಾಯಕ ಮಾಡಿಕೊಳ್ಳಬೇಕಾಗಿದೆ.

ಕಾಲೇಜಿಗೆ ಕಾಂಪೌಂಡ್ ನಿರ್ಮಾಣವಾದರೂ ಈ ವರೆಗೆ ಬಣ್ಣ ಬಳಿದಿಲ್ಲ. ಜೊತೆಗೆ ಅದು ಪೂರ್ಣಗೊಂಡಿಲ್ಲ. ಖಾಸಗಿ ಬಸ್‌ಗಳು ನಿಲುಗಡೆ ಜಾಗ ಮಾಡಿಕೊಂಡಿದ್ದಾರೆ. ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೂರು ಕಟ್ಟಡಗಳನ್ನು ಒಳಗೊಂಡಿದ್ದು ಒಂದೇ ಕಾಂಪೌಂಡ್ ಇದೆ. ಸೂಕ್ತ ಭದ್ರತೆ ಇಲ್ಲದೆ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಆತಂಕದಲ್ಲೇ ಕಾಲ ಕಳೆಯುವಂತಾಗಿದೆ.




> ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ದೂರದ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಜ್ಞಾನಾರ್ಜನೆಗಾಗಿ ಬರುತ್ತಾರೆ. ಅತ್ಯುತ್ತಮ ಬೋಧಕ ಸಿಬ್ಬಂದಿ ಉತ್ತಮ ವಾತಾವರಣ ಕಲ್ಪಿಸಲಾಗಿದೆ. ನಗರ ಸಾರಿಗೆ ಬಸ್ ನಿಲ್ದಾಣದಿಂದ ಅಣತಿ ದೂರದಲ್ಲಿ ಕಾಲೇಜು ಇರುವುದರಿಂದ ವಿದ್ಯಾರ್ಥಿಗಳು ನಿರೀಕ್ಷೆ ಮೀರಿ ಪ್ರವೇಶ ಪಡೆಯುತ್ತಾರೆ. ಮಕ್ಕಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾಲೇಜು ಮುಂಭಾಗದ ರಸ್ತೆಯಲ್ಲಿ ಅನಗತ್ಯ ವಾಹನಗಳ ಓಡಾಟಕ್ಕೆ ಬ್ರೇಕ್ ಹಾಕಬೇಕು.
>
> - ಡಿ.ಕೆ. ಮಂಜಯ್ಯ, ಪ್ರಾಂಶುಪಾಲ




### ಅಚ್ಚುಕಟ್ಟು ಕಾಲೇಜು

ಗಂಧದಕೋಠಿ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಎಲ್ಲಾ ಸೌಕರ್ಯಗಳನ್ನು ಒಳಗೊಂಡಿದೆ. 28 ತರಗತಿ ಕೊಠಡಿ, 4 ಅಂತಸ್ತಿನ ಕಟ್ಟಡ, ಸ್ಮಾರ್ಟ್ ಕ್ಲಾಸ್, ಪ್ರೊಗ್ರಾಂ ಕಾರಿಡಾರ್, ಎಲ್ಲಾ ತರಗತಿಗಳಿಗೂ ಸಿಸಿಟಿವಿ, ಫ್ಯಾನ್ ಅಳವಡಿಸಲಾಗಿದೆ. ಕೊಳವೆ ಬಾವಿ ಹಾಗೂ ಪೈಪ್‌ಲೈನ್ ವ್ಯವಸ್ಥೆ ಮಾಡಲಾಗಿದ್ದು ಎರಡು ಕುಡಿಯುವ ನೀರು ಶುದ್ಧಿಕರಣ ಯಂತ್ರಗಳಿವೆ. ಕಾಲೇಜಿನ ಗೋಡೆ ಸುತ್ತ ಕಾಂಕ್ರೀಟೀಕರಣ, ಸುತ್ತಲೂ ವಾಹನ ನಿಲ್ಲಿಸಲು ಕಾಂಕ್ರೀಟ್, ಹೊರ ಆವರಣ ಇಂಟರ್ ಲಾಕ್, 84 ಜಾತಿಯ ಗಿಡಗಳು, ಮುಖ್ಯವಾಗಿ ಹಣ್ಣು, ಹೂವಿನ ಗಿಡಗಳು, ಕಬ್ಬು ಬೆಳೆಯಲಾಗಿದೆ. ಕಾಲೇಜಿನಲ್ಲಿ ಇಬ್ಬರು ಡಿ ಗ್ರೂಪ್ ನೌಕರರು, ಹೈಜನಿಕ್ ಟಾಯ್ಲೆಟ್ ಹದಿನೆಂಟು ಕೊಠಡಿಗಳಿವೆ. ಸುಸಜ್ಜಿತ ಲ್ಯಾಬ್, ವೈಫೈ, 400 ಜನರು ಕೂರುವ ಸಭಾಂಗಣ ಸಿದ್ಧವಾಗಿದೆ. ಪ್ರಸ್ತುತ ಕಾಲೇಜಿನಲ್ಲಿ 850 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆದಿದ್ದಾರೆ.

### ಹೆಚ್ಚುವರಿ ಸಿಬ್ಬಂದಿ ಬೇಕು


850 ವಿದ್ಯಾರ್ಥಿಗಳಿರುವ ಕಾಲೇಜಿಗೆ ಹೆಚ್ಚುವರಿ ಉಪನ್ಯಾಸಕರು ಹಾಗೂ ಬೋಧಕೇತರ ಸಿಬ್ಬಂದಿಯ ಅವಶ್ಯಕತೆ ಇದೆ. 2014ರಲ್ಲಿ ಆರಂಭವಾಗಿರುವ ಕಾಲೇಜು ಇದಾಗಿದ್ದು, ಶೀಘ್ರದಲ್ಲೇ ನ್ಯಾಕ್ ಸಮಿತಿ ಕೂಡ ಭೇಟಿ ನೀಡಲಿದೆ. ಖಾಲಿ ಇರುವ ಡಿ ಗ್ರೂಪ್ ನೌಕರ ಹುದ್ದೆ ಭರ್ತಿಗೆ ಸರ್ಕಾರ ಕ್ರಮ ವಹಿಸಬೇಕು. ಅರೆಕಾಲಿಕ ಲೈಬ್ರೆರಿಯನ್ ಇರುವುದರಿಂದ ಅವರನ್ನು ಖಾಯಂ ಮಾಡಬೇಕಿದೆ. 11 ಪೂರ್ಣಾವಧಿ, 30 ಅರೆಕಾಲಿಕ ಉಪನ್ಯಾಸಕರು ಇದ್ದಾರೆ. ಪ್ರಥಮ ದರ್ಜೆ ಸಹಾಯಕರು ಒಬ್ಬರೇ ಇರುವುದರಿಂದ ಎಫ್‌ಡಿಎ, ಎಸ್‌ಡಿಎಗಳ ನೇಮಕವಾಗಬೇಕಿದೆ.

# ಪ್ರತೀಕಾರದ ಹೆಜ್ಜೆಗೆ ದೇಶದ ಪ್ರತಿಯೊಬ್ಬರ ಬೆಂಬಲ ಅಗತ್ಯ

## ಮೋದಿಗೆ ಆಂಜನೇಯ ಶಕ್ತಿ ನೀಡಲಿ ಮಾಜಿ ಪ್ರಧಾನಿ ದೇವೇಗೌಡ ಆಶಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಭೂ ಲೋಕದ ಸ್ವರ್ಗ ಎಂದು ಕರೆಯುವ ಕಾಶ್ಮೀರದ ಮೇಲಿನ ಉಗ್ರರ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳುವ ವರೆಗೆ ಕೇಂದ್ರ ಸರ್ಕಾರ ವಿರಮಿಸಬಾರದು. ಪ್ರಧಾನಿ ಮೋದಿಗೆ ಆಂಜನೇಯ ಶಕ್ತಿ ನೀಡಲಿ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಹೇಳಿದರು.




ತಾಲ್ಲೂಕಿನ ದ್ಯಾಪಲಾಪುರದಲ್ಲಿ ಇತ್ತೀಚೆಗೆ ನಡೆದ ಶ್ರೀ ಆಂಜನೇಯಸ್ವಾಮಿ ದೇವಾಲಯದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಕಾಶ್ಮೀರಕ್ಕೆ ಭೇಟಿ ನೀಡಿದ್ದ 28 ಪ್ರವಾಸಿಗರನ್ನು ನಿಷ್ಕರುಣೆಯಿಂದ ಹತ್ಯೆ ಮಾಡಿದ್ದು ಅತ್ಯಂತ ಹೇಯ ಕೃತ್ಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಶ್ಮೀರದಲ್ಲಿ ಉಪಟಳ ನೀಡುತ್ತಿರುವ ಉಗ್ರರು ಎಲ್ಲೇ ಅಡಗಿದ್ದರೂ ಹೊರಗೆಳೆದು ಶಿಕ್ಷಿಸುವವರೆಗೂ ಬಿಡುವುದಿಲ್ಲ ಎಂದು ಪ್ರಧಾನಿ ಮೋದಿ ಅವರು ಘೋಷಿಸಿದ್ದಾರೆ. ಪಾಕಿಸ್ತಾನದಿಂದ ಆಮದಾಗುವ ಮತ್ತು ಪಾಕಿಸ್ತಾನಕ್ಕೆ ಭಾರತದಿಂದ ರಫ್ತಾಗುವ ವಸ್ತುಗಳ ಮೇಲೆ ನಿರ್ಬಂಧ ಹೇರುವ ಕಠಿಣ ಕ್ರಮಗಳನ್ನು ಕೈಗೊಂಡಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಷ್ಟ್ರೀಯ ಭದ್ರತೆ ವಿಷಯದಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ಒಗ್ಗಟ್ಟಾಗಿರಬೇಕು. ಪ್ರಧಾನ ಮಂತ್ರಿಯವರ ತೀರ್ಮಾನಗಳಿಗೆ ದೇಶದ ಎಲ್ಲರೂ ಒಕ್ಕೊರಲಿನ ಬೆಂಬಲ ಘೋಷಿಸಬೇಕು. ಆಗ ಮಾತ್ರ ಉಗ್ರಗಾಮಿಗಳ ದುಷ್ಕೃತ್ಯಗಳನ್ನು ತಡೆಯಬಹುದು ಎಂದು ದೇವೇಗೌಡರು ಹೇಳಿದರು.

ಕಾಂಗ್ರೆಸ್ ಪಕ್ಷದ ನಾಯಕರು ಆರಂಭದಲ್ಲಿ ಪ್ರಧಾನಿಯವರ ನಿರ್ಧಾರಗಳಿಗೆ ಸಹಮತ ವ್ಯಕ್ತಪಡಿಸಿದ್ದರೂ ಆ ನಂತರ ಕೆಲವು ಭಿನ್ನಾಭಿಪ್ರಾಯಗಳು ವ್ಯಕ್ತವಾಗಿದ್ದವು. ಪುನಃ ಏಕತೆಯನ್ನು ಕಾಂಗ್ರೆಸ್ ಮುಖಂಡರು ಪ್ರತಿಪಾದಿಸಿದ್ದಾರೆ. ಹೀಗೆ ಸಮಯಕ್ಕೊಂದು ಅಭಿಪ್ರಾಯ ವ್ಯಕ್ತಪಡಿಸುವುದು ಸಲ್ಲದು ಎಂದು ಬೇಸರ ವ್ಯಕ್ತಪಡಿಸಿದರು.

ರಾಷ್ಟ್ರೀಯ ಭದ್ರತೆ ಸೂಕ್ಷ್ಮ ವಿಚಾರ. ಹಾಗಾಗಿ ಪ್ರಧಾನ ಮಂತ್ರಿ ತೆಗೆದುಕೊಳ್ಳುವ ನಿರ್ಧಾರಗಳಿಗೆ ನಾನು ಮತ್ತು ನನ್ನ ಪಕ್ಷದ ಸಂಪೂರ್ಣ ಬೆಂಬಲವಿದೆ.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೂ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ. ಮುಂದೆ ಇಂತಹ ದುಷ್ಕೃತ್ಯಗಳು ನಡೆಯಬಾರದು.

ಉಗ್ರರಿಗೆ ತಕ್ಕ ಪಾಠ ಕಲಿಸಲೇಬೇಕು. ರಾಷ್ಟ್ರೀಯ ಭದ್ರತೆ ವಿಚಾರದಲ್ಲಿ ಪಕ್ಷಬೇಧ ಮರೆತು ಒಗ್ಗಟ್ಟು ಪ್ರದರ್ಶಿಸಿ ಪ್ರಧಾನಿಯವರಿಗೆ ಬೆಂಬಲ ನೀಡಬೇಕು. ಉಗ್ರರನ್ನು ಸಂಪೂರ್ಣ ನಾಶ ಮಾಡುವವರೆಗೂ ಹೋರಾಟ ಮುಂದುವರಿಯಲಿ. ಶ್ರೀ ಆಂಜನೇಯ ಸ್ವಾಮಿ ಪ್ರಧಾನಿ ನರೇಂದ್ರಮೋದಿಯವರಿಗೆ ಶಕ್ತಿ ನೀಡಲಿ ಎಂದು ದೇವೇಗೌಡರು ಆಶಿಸಿದರು.

## ದೇವರ ಆಶೀರ್ವಾದ ಬೇಕು

ಮನಸ್ಸನ್ನು ನಿಗ್ರಹಿಸುವ ಶಕ್ತಿ ಇದ್ದರೆ ಏನು ಬೇಕಾದರೂ ಸಾಧಿಸಬಹುದು. ಅದಕ್ಕೆ ದೇವರ ಆಶೀರ್ವಾದ ಬೇಕು. ದೇವರ ಎದುರು ನಿಲ್ಲಲು ಯಾರಿಗೂ ಸಾಧ್ಯವಿಲ್ಲ. ಹಾಗಾಗಿ ನಾನು ದೇವರನ್ನು ನಂಬಿದ್ದೇನೆ. ಇಂದು ಶ್ರೀ ಆಂಜನೇಯ ದೇವಾಲಯದ ಉದ್ಘಾಟನೆ ಮಾಡುವಾಗ ಅದನ್ನೇ ಬೇಡಿದ್ದೇನೆ ಎಂದರು.




ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ದ್ಯಾಪಲಾಪುರ ಗ್ರಾಮಕ್ಕೆ ದೇವೇಗೌಡರು ಭೇಟಿ ನೀಡಿ ದೇವಾಲಯ ಉದ್ಘಾಟನೆ ಮಾಡಿರುವುದು ನಮ್ಮ ಪುಣ್ಯ. ದೇವೇಗೌಡರ ಕೃಪೆಯಿಂದಲೇ ದ್ಯಾಪಲಾಪುರ ಅಭಿವೃದ್ಧಿಯಾಗಿದೆ. ನಾನು ಶಾಸಕನಾದ ನಂತರ ಪಕ್ಷ ಬೇಧ ಮಾಡದೆ ಅಭಿವೃದ್ಧಿಗೆ ಸಹಕಾರ ನೀಡುತ್ತಾ ಬಂದಿದ್ದೇನೆ . ಗ್ರಾಮಸ್ಥರು ಒಗ್ಗಟ್ಟಿನಿಂದ ಇರಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಅವರು ಮಾತನಾಡಿ, ದೇವೇಗೌಡರು ಮತ್ತು ರೇವಣ್ಣ ಅವರು ಸುದೀರ್ಘ ಕಾಲ ರಾಜಕಾರಣ ಮಾಡಿದರೂ ಅಧಿಕಾರದಲ್ಲಿದ್ದುದು ಬಹಳ ಕಡಿಮೆ ಅವಧಿ. ಕನಿಷ್ಠ ಅವಧಿಯಲ್ಲೇ ಗರಿಷ್ಠ ಕೊಡುಗೆಯನ್ನು ನೀಡಿದ್ದಾರೆ. ಹಾಸನ ಜಿಲ್ಲೆಯ ರಸ್ತೆಗಳು ಹಾಗು ಹೊರ ಜಿಲ್ಲೆಗಳ ರಸ್ತೆಗಳ ಸ್ಥಿತಿ ನೋಡಿದರೆ ರೇವಣ್ಣ ಅವರ ಕೊಡುಗೆ ಏನು ಎಂಬುದು ಗೊತ್ತಾಗುತ್ತದೆ. ರೇವಣ್ಣ ಅವರು ಜಿಲ್ಲೆಯಲ್ಲಿ 600ಕ್ಕೂ ಹೆಚ್ಚು ದೇವಾಲಯ ನಿರ್ಮಾಣಕ್ಕೆ ಸಹಾಯ ಮಾಡಿದ್ದಾರೆ. ಮುಂದಿನ ಪೀಳಿಗೆ ದೇವೇಗೌಡರು, ರೇವಣ್ಣ ಅವರ ಕೊಡುಗೆಯನ್ನು ಸ್ಮರಣೆ ಮಾಡುತ್ತದೆ ಎಂದು ಹೇಳಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಆಶೀರ್ವಚನ ನೀಡಿದರು. ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬೈಲಹಳ್ಳಿ ಸತ್ಯನಾರಾಯಣ, ಮಾಜಿ ಉಪಾಧ್ಯಕ್ಷ ಬೂವನಹಳ್ಳಿ ಸ್ವಾಮಿಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಸ್. ಎಸ್. ರಘುಗೌಡ, ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು, ನಿರ್ದೇಶಕ ಬಿದರಿಕೆರೆ ಜಯರಾಂ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಗೌರವಾಧ್ಯಕ್ಷ ಈ. ಕೃಷ್ಣೇಗೌಡ ಮತ್ತಿತರರು ಉಪಸ್ಥಿತರಿದ್ದರು.

## ದೃಢ ಸಂಕಲ್ಪದಿಂದ ಕಠಿಣವು ಸರಳ ಎಂದು ಸಾರಿದ ಭಗೀರಥ




ಹಾಸನ: ಕಠಿಣ ತಪಸ್ಸು, ಪರಿಶ್ರಮ ಹಾಗೂ ದೃಢ ಸಂಕಲ್ಪದಿಂದ ಶಿವನನ್ನು ಒಲಿಸಿಕೊಂಡು ಗಂಗೆಯನ್ನು ಧರೆಗೆ ತಂದ ಭಗೀರಥ ಮಹರ್ಷಿ ಅವರ ಚರಿತ್ರೆಯನ್ನು ಪ್ರತಿಯೊಬ್ಬರು ಅರಿಯಬೇಕು ಎಂದು ನಗರಸಭೆ ಅಧ್ಯಕ ಎಂ. ಚಂದ್ರೇಗೌಡ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಭಾನುವಾರ ಆಯೋಜಿಸಿದ್ದ ಭಗೀರಥ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಭಗೀರಥ ಎಲ್ಲಾ ಸಮುದಾಯದವರಿಗೂ ಸೇರಿದವರು. ಯಾವುದೇ ಕೆಲಸ ಮಾಡಬೇಕಾದರು ಸತತ ಪ್ರಯತ್ನಪಟ್ಟರೆ ಯಶಸ್ಸು ಸಾಧ್ಯ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ಅವರ ಮಾರ್ಗದಲ್ಲಿ ನಾವೆಲ್ಲರೂ ಸಾಗೋಣ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲ ಮಾತನಾಡಿ, ಭಗೀರಥ ಯುಗ ಯುಗಗಳಲ್ಲೂ ನೆನೆಸಿಕೊಳ್ಳುವಂತಹ ಕೆಲಸ ಮಾಡಿದ್ದಾರೆ. ಆದುದರಿಂದ ಅವರನ್ನು ಇಂದಿಗೂ ನೆನೆಪು ಮಾಡಿಕೊಳ್ಳುತ್ತಿದ್ದೇವೆ. ಅವರು ಕಠಿಣ ತಪಸ್ಸಿನ ಮೂಲಕ ಗಂಗೆಯನ್ನು ಹರಿಸಿದ ಮಹಾನ್ ವ್ಯಕ್ತಿ ಎಂದರು.

ಸಾಹಿತಿ ಕೊಟ್ರೇಶ್ ಎಸ್. ಉಪ್ಪಾರ್ ಮಾತನಾಡಿ, ಭಗೀರಥ ಕಾರ್ಯ ಸಿದ್ಧಿಗೆ ಸತತ ಪ್ರಯತ್ನ ಮಾಡುವ ಗುಣವುಳ್ಳವರಾಗಿದ್ದವರು. ಸಮುದಾಯದ ಜವಾಬ್ದಾರಿ ಹೊತ್ತಂತವರಾಗಿ ದ್ದಾರೆ. ತನ್ನ ಅರವತ್ತು ತಾತಂದಿರಿಗೆ ಸದ್ಗತಿಯನ್ನು ನೀಡಲು ಇವರು ಗಂಗೆಯನ್ನು ತನ್ನ ಹಿಂದೆ ಧರೆಗೆ ತಂದಿದ್ದಕ್ಕೆ ಗಂಗೆಗೆ ಭಾಗೀರತಿ ಎಂದು ಹೆಸರು ಬಂದಿದೆ. ಕರ್ನಾಟಕ ಮತ್ತು ಆಂಧ್ರ ಪ್ರದೇಶದಲ್ಲಿ ಹೆಚ್ಚು ಉಪ್ಪಾರ ಸಮುದಾಯದವರಿದ್ದಾರೆ. ಇವರು ರಾಮನ ಪರಂಪರೆಯವರಾಗಿದ್ದಾರೆ ಎಂದು ಉಪನ್ಯಾಸ ನೀಡಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಹೆಚ್.ಪಿ. ತಾರಾನಾಥ್ ಮತ್ತಿತರರಿದ್ದರು.

## ಪರಿಶ್ರಮವಿದ್ದರೆ ಯಶಸ್ಸು ಖಚಿತ ಎಂಬುದಕ್ಕೆ ಭಗೀರಥ ಸಾಕ್ಷಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಲೋಕ ಕಲ್ಯಾಣಕ್ಕೆ ಗಂಗೆಯನ್ನು ಧರೆಗೆ ತರಲು ನಿರಂತರ ಶ್ರಮವಹಿಸಿ ಯಶಸ್ಸು ಗಳಿಸಿದ ಮಹರ್ಷಿ ಭಗೀರಥರ ದೃಢ ಸಂಕಲ್ಪ ನಮಗೆ ಮಾದರಿ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.



ತಾಲ್ಲೂಕು ಆಡಳಿತ ವತಿಯಿಂದ ಮಿನಿ ವಿಧಾನಸೌಧದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಭಗೀರಥ ಜಯಂತಿ ಉದ್ಘಾಟಿಸಿ ಮಾತನಾಡಿ, ಭಗೀರಥರ ಸಾಹಸಗಾಥೆಯು ನಿರ್ಣಯ, ಭಕ್ತಿ ಹಾಗೂ ಅಸಾಧ್ಯವನ್ನು ಕಠಿಣ ಪ್ರಯತ್ನದ ಮೂಲಕ ಸಾಧ್ಯ ಮಾಡುವುದನ್ನು ತೋರಿಸುತ್ತದೆ. ತಪಸ್ಸಿನಿಂದ ಗಂಗೆಯನ್ನು ಭೂಮಿಗೆ ತಂದು ತನ್ನ ಹಿರಿಯರಿಗೆ ಜಲತರ್ಪಣ ಮಾಡಿದ ಭಗೀರಥನ ಸಾಧನೆ ಅಸಾಮಾನ್ಯ. ಇದು ಪರಿಶ್ರಮ ಮತ್ತು ಕಠಿಣ ನಿರ್ಣಯಗಳ ಮೂಲಕ ಜಯ ಸಾಧಿಸಬಹುದು ಎಂಬುದಕ್ಕೆ ನಿದರ್ಶನ ಎಂದರು.

ಭಗೀರಥ ಮಹಿರ್ಷಿಗಳ ಅರಿತು, ಅವರ ಮಾರ್ಗದಲ್ಲಿ ನಡೆಯುವ ಅವಶ್ಯಕತೆ ಇದೆ. ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗು ಶೈಕ್ಷಣಿಕವಾಗಿ ಹಿಂದುಳಿದಿರುವುದು ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದರು.

### ಅಧಿಕಾರಿಗಳ ವಿರುದ್ಧ ಗರಂ

ಮಹರ್ಷಿ ಭಗೀರಥ ಜಯಂತಿ ಆಚರಣೆಗೆ ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ತೋರುತ್ತಿದೆ. ಯಾವುದೇ ಪೂರ್ವಭಾವಿ ಸಭೆ ನಡೆಸದೆ ಉಪ್ಪಾರ ಸಮಾಜಕ್ಕೆ ಸರಿಯಾಗಿ ಮಾಹಿತಿ ನೀಡದೆ ಆಚರಣೆ ಮಾಡಲಾಗುತ್ತದೆ. ಬೇರೆ ಜಯಂತಿಗಳಿಗೆ ತೋರುವ ಆಸಕ್ತಿ ಭಗೀರಥ ಜಯಂತಿಗೆ ಅಧಿಕಾರಿಗಳು ತೋರುವುದಿಲ್ಲ ಎಂದು ಗರಂ ಆದರು. ಉಪವಿಭಾಗಾಧಿಕಾರಿ ಎಂ.ಕೆ. ಶ್ರುತಿ, ಪುರಸಭಾ ಮುಖ್ಯಧಿಕಾರಿ ಮಹೇಶ್ವರಪ್ಪ, ಪುರಸಭೆ ಸದಸ್ಯರಾದ ಅನ್ನಪೂರ್ಣ, ರೇಖಾ ರುದ್ರ ಕುಮಾರ್, ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷೆ ಶಾರದಾ ಗುರುಮೂರ್ತಿ ಇತರರಿದ್ದರು.

# ಹಿಂಡನ್‌ಬರ್ಗ್ ಹೆಲಿಪ್ಲೇನ್ ಅವಘಡ

## ಹೀಲಿಯಂ ಬಳಕೆಗೇ ಕುತ್ತು ತಂದ ಐತಿಹಾಸಿಕ ದುರಂತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಿಂಡನ್‌ಬರ್ಗ್ ಹೆಲಿಪ್ಲೇನ್ ದುರಂತವು ಇತಿಹಾಸದಲ್ಲಿ ಒಂದು ದುರಂತ ಘಟನೆಯಾಗಿ ಗುರುತಿಸಲ್ಪಟ್ಟಿದೆ. ಜರ್ಮನಿಯ ಏರ್‌ಶಿಪ್ 129 ಹಿಂಡನ್‌ಬರ್ಗ್, 1937ರ ಮೇ 6ರಂದು ಅಮೆರಿಕದ ನ್ಯೂಜೆರ್ಸಿಯ ಲೇಕ್‌ಹರ್ಸ್ಟ್‌ನ ನೌಕಾಸ್ಥಾನದಲ್ಲಿ ಇಳಿಯುವ ಸಂದರ್ಭದಲ್ಲಿ ಭೀಕರ ಬೆಂಕಿಗೆ ಆಹುತಿಯಾಯಿತು. ಈ ಘಟನೆಯಲ್ಲಿ 97 ಜನರ ಪೈಕಿ 35 ಜನರು ಮೃತಪಟ್ಟರು. ಒಬ್ಬ ಕಾರ್ಮಿಕ ಸೇರಿದಂತೆ ಮತ್ತು ಉಳಿದವರು ಗಂಭೀರವಾಗಿ ಗಾಯಗೊಂಡರು. ಈ ದುರಂತವು ಏರ್‌ಶಿಪ್‌ಗಳ ಯುಗದ ಅಂತ್ಯಕ್ಕೆ ಕಾರಣವಾಯಿತು ಮತ್ತು ವಾಯುಯಾನದ ಇತಿಹಾಸದಲ್ಲಿ ಒಂದು ಪ್ರಮುಖ ತಿರುವನ್ನು ತಂದಿತು. ಈ ಲೇಖನವು ದುರಂತದ ಕಾರಣಗಳು, ಘಟನೆಯ ವಿವರಗಳು ಮತ್ತು ಅದರ ದೀರ್ಘಕಾಲೀನ ಪರಿಣಾಮಗಳನ್ನು ವಿಶ್ಲೇಷಿಸುತ್ತದೆ.




### ಘಟನೆಯ ಹಿನ್ನೆಲೆ

ಹಿಂಡನ್‌ಬರ್ಗ್ ಜರ್ಮನಿಯ ಝೆಪ್ಪೆಲಿನ್ ಕಂಪನಿಯಿಂದ ನಿರ್ಮಿತವಾದ ಐಷಾರಾಮಿ ಏರ್‌ಶಿಪ್ ಆಗಿತ್ತು. ಇದು 245 ಮೀಟರ್ ಉದ್ದವನ್ನು ಹೊಂದಿದ್ದು ಆಗಿನ ಅತ್ಯಂತ ದೊಡ್ಡ ವಾಯುನೌಕೆಯಾಗಿತ್ತು. ಇದನ್ನು ಜರ್ಮನಿಯಿಂದ ಅಮೆರಿಕಕ್ಕೆ ದೀರ್ಘ-ದೂರದ ಪ್ರಯಾಣಕ್ಕಾಗಿ ವಿನ್ಯಾಸಗೊಳಿಸಲಾಗಿತ್ತು. ಇದರಲ್ಲಿ ಐಷಾರಾಮಿ ಕೊಠಡಿಗಳು, ಊಟದ ಕೊಠಡಿ, ಮತ್ತು ಧೂಮಪಾನ ಕೊಠಡಿಗಳಂತಹ ಸೌಲಭ್ಯಗಳಿದ್ದವು. ಇದನ್ನು ಚಾಲನೆ ಮಾಡಲು ಹೈಡ್ರೋಜನ್ ಗ್ಯಾಸ್ ಬಳಸಲಾಗುತ್ತಿತ್ತು. ಇದು ಆಗಿನ ದಿನಗಳಲ್ಲಿ ಸಾಮಾನ್ಯವಾಗಿತ್ತಾದರೂ ಅತ್ಯಂತ ಸುಡುವ ಗುಣವನ್ನು ಹೊಂದಿತ್ತು.

### ದುರಂತದ ಕಾರಣಗಳು

ಹಿಂಡನ್‌ಬರ್ಗ್ ದುರಂತಕ್ಕೆ ಒಂದೇ ಕಾರಣವನ್ನು ಸ್ಪಷ್ಟವಾಗಿ ಗುರುತಿಸಲಾಗಿಲ್ಲ. ಆದರೆ ಹಲವಾರು ಸಂಭವನೀಯ ಕಾರಣಗಳನ್ನು ತನಿಖಾಧಿಕಾರಿಗಳು ಮತ್ತು ಇತಿಹಾಸಕಾರರು ಮುಂದಿಟ್ಟಿದ್ದಾರೆ. ಹೈಡ್ರೋಜನ್ ಗ್ಯಾಸ್ ಸೋರಿಕೆ:

ಹಿಂಡನ್‌ಬರ್ಗ್‌ನಲ್ಲಿ ಎತ್ತರಕ್ಕೆ ತೇಲಲು ಹೈಡ್ರೋಜನ್ ಗ್ಯಾಸ್ ಬಳಸಲಾಗಿತ್ತು. ಇದು ಅತ್ಯಂತ ಸುಡುವ ಗುಣವನ್ನು ಹೊಂದಿದ್ದು, ಸಣ್ಣ ಸೋರಿಕೆಯಾದರೂ ದೊಡ್ಡ ಅಪಾಯವನ್ನು ಉಂಟುಮಾಡಬಹುದಿತ್ತು. ತನಿಖೆಯ ವರದಿಗಳ ಪ್ರಕಾರ ಏರ್ ಶಿಪ್‌ನ ಹಿಂಭಾಗದಲ್ಲಿ ಗ್ಯಾಸ್ ಸೋರಿಕೆಯಾಗಿರಬಹುದು, ಇದು ಸ್ಫುರದಿಕೆಯೊಂದಿಗೆ ಬೆಂಕಿಯನ್ನು ಉಂಟುಮಾಡಿತು.



### ವಿದ್ಯುತ್ ಸ್ಫುರದಿಕೆ

ಘಟನೆಯ ಸಮಯದಲ್ಲಿ ಲೇಕ್‌ಹರ್ಸ್ಟ್‌ನಲ್ಲಿ ಮಳೆಗಾಲದ ವಾತಾವರಣವಿತ್ತು. ಏರ್‌ಶಿಪ್‌ನ ಬಾಹ್ಯ ಚರ್ಮವು ತೇವವಾಗಿದ್ದರಿಂದ ವಿದ್ಯುತ್ ಚಾರ್ಜ್ ಸಂಗ್ರಹವಾಗಿರಬಹುದು. ಏರ್‌ಶಿಪ್‌ನ ರೋಪ್‌ಗಳು ನೆಲಕ್ಕೆ ತಾಗಿದಾಗ ಸ್ಥಾಯಿವಿದ್ಯುತ್ ಸ್ಫುರದಿಕೆಯೊಂದಿಗೆ ಹೈಡ್ರೋಜನ್ ಗ್ಯಾಸ್‌ಗೆ ಬೆಂಕಿಯುಂಟಾಗಿರಬಹುದು ಎಂದು ಊಹಿಸಲಾಗಿದೆ.

### ಬಾಹ್ಯ ಚರ್ಮದ ಲೇಪನ

ಏರ್‌ಶಿಪ್‌ನ ಬಾಹ್ಯ ಚರ್ಮವನ್ನು ರಕ್ಷಣೆಗಾಗಿ ಒಂದು ರಾಸಾಯನಿಕ ಲೇಪನದಿಂದ ಕವರ್ ಮಾಡಲಾಗಿತ್ತು. ಕೆಲವು ತಜ್ಞರು ಈ ಲೇಪನವು ಸುಡುವ ಗುಣವನ್ನು ಹೊಂದಿರಬಹುದು ಎಂದು ವಾದಿಸಿದ್ದಾರೆ. ಈ ಲೇಪನವು ಸ್ಫುರದಿಕೆಯಿಂದ ಸುಲಭವಾಗಿ ಬೆಂಕಿಯನ್ನು ಹಿಡಿಯಬಹುದಿತ್ತು. ಇದು ಬೆಂಕಿಯನ್ನು ತೀವ್ರಗೊಳಿಸಿತು.


ಉದ್ದೇಶಪೂರ್ವಕ ಕೃತ್ಯ: ಕೆಲವು ಊಹಾಪೋಹಗಳ ಪ್ರಕಾರ, ದುರಂತವು ಉದ್ದೇಶಪೂರ್ವಕ ಕೃತ್ಯವಾಗಿರಬಹುದು. ಆದರೆ, ಈ ಆರೋಪಗಳಿಗೆಯಾವುದೇ ಪುರಾವೆಗಳಿಲ್ಲ. ಇನ್ನು ಕೆಲವರು ತಾಂತ್ರಿಕ ದೋಷ ಅಥವಾ ಸಿಬ್ಬಂದಿಯ ತಪ್ಪಿನಿಂದ ಈ ಘಟನೆ ಸಂಭವಿಸಿರಬಹುದು ಎಂದು ಭಾವಿಸಿದ್ದಾರೆ.

ದುರಂತದ ವಿವರ: 1937ರ ಮೇ 3ರಂದು ಹಿಂಡನ್‌ಬರ್ಗ್ ಜರ್ಮನಿಯ ಫ್ರಾಂಕ್‌ಫರ್ಟ್‌ನಿಂದ ಅಮೆರಿಕದ ಲೇಕ್ ಹರ್ಸ್ಟ್‌ಗೆ ಪ್ರಯಾಣ ಆರಂಭಿಸಿತು. ಮೇ 6ರಂದು ಸಂಜೆ 7.25ಕ್ಕೆ ಏರ್‌ಶಿಪ್ ಲೇಕ್ ಹರ್ಸ್ಟ್‌ನ ನೌಕಾಸ್ಥಾನದಲ್ಲಿ ಇಳಿಯಲು ಸಿದ್ಧವಾಯಿತು. ಆದರೆ, ಇಳಿಯುವ ಕೆಲವೇ ಕ್ಷಣಗಳಲ್ಲಿ ಏರ್‌ಶಿಪ್‌ನ ಹಿಂಭಾಗದಲ್ಲಿ ಬೆಂಕಿಯ ಕಿಡಿಯೊಂದು ಕಾಣಿಸಿತು. ಕೆಲವೇ ಸೆಕೆಂಡುಗಳಲ್ಲಿ ಇಡೀ ಏರ್‌ಶಿಪ್ ಭೀಕರ ಬೆಂಕಿಯಲ್ಲಿ ಕವಿದು ಹೋಗಿತ್ತು. 34 ಸೆಕೆಂಡುಗಳಲ್ಲಿ ಏರ್‌ಶಿಪ್ ಸಂಪೂರ್ಣವಾಗಿ ಭಸ್ಮವಾಯಿತು. ಈ ಘಟನೆಯನ್ನು ರೇಡಿಯೋ ವರದಿಗಾರ ಹರ್ಬರ್ಟ್ ಮಾರಿಸನ್ ತನ್ನ ಭಾವುಕ ವಿವರಣೆಯ ಮೂಲಕ ವಿಶ್ವಕ್ಕೆ ತಿಳಿಸಿದರು. ಅವರ ಓಹ್, ದಿ ಹ್ಯೂಮಾನಿಟಿ! ಎಂಬ ಉದ್ಗಾರವು ಈ ದುರಂತದ ಭೀಕರತೆಯನ್ನು ಸಾರುತ್ತದೆ. ಈ ಘಟನೆಯ ದೃಶ್ಯಗಳು ಛಾಯಾಚಿತ್ರಗಳು ಮತ್ತು ಚಲನಚಿತ್ರಗಳ ಮೂಲಕ ದಾಖಲಾದವು. ಇದು ಜನರ ಮನಸ್ಸಿನಲ್ಲಿ ದೀರ್ಘಕಾಲೀನ ಛಾಪನ್ನು ಮೂಡಿಸಿತು.ದುರಂತದ ಪರಿಣಾಮಗಳುಹಿಂಡನ್‌ಬರ್ಗ್ ದುರಂತವು ವಾಯುಯಾನ ಇತಿಹಾಸದಲ್ಲಿ ದೀರ್ಘಕಾಲೀನ ಪರಿಣಾಮಗಳನ್ನು ಬೀರಿತು

ಈ ದುರಂತವು ಏರ್‌ಶಿಪ್‌ಗಳ ಸುರಕ್ಷತೆಯ ಬಗ್ಗೆ ಜನರಲ್ಲಿ ಭಯವನ್ನುಂಟು ಮಾಡಿತು. ಜನರು ಏರ್‌ಶಿಪ್‌ಗಳನ್ನು ಬಳಸಲು ಹಿಂಜರಿದರು. ಏರ್‌ಶಿಪ್‌ಗಳ ವಾಣಿಜ್ಯ ಬಳಕೆ ಕ್ಷಿಪ್ರವಾಗಿ ಕಡಿಮೆಯಾಯಿತು. ಇದು ವಿಮಾನಗಳಂತಹ ಇತರ ವಾಯುಯಾನ ಸಾಧನಗಳ ಅಭಿವೃದ್ಧಿಗೆ ದಾರಿಮಾಡಿಕೊಟ್ಟಿತು.

ಸುರಕ್ಷತಾ ನಿಯಮಗಳಲ್ಲಿ ಬದಲಾವಣೆ: ಈ ಘಟನೆಯು ವಾಯುಯಾನ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿಸಿತು. ಇದರಿಂದಾಗಿ ಹೈಡ್ರೋಜನ್ ಬದಲಿಗೆ ಹೀಲಿಯಂ ಗ್ಯಾಸ್‌ನಂತಹ ಸುರಕ್ಷಿತ ವಿಕಲ್ಪಗಳ ಬಳಕೆಗೆ ಒತ್ತು ನೀಡಲಾಯಿತು. ಆದರೆ ಆಗಿನ ದಿನಗಳಲ್ಲಿ ಹೀಲಿಯಂ ದುಬಾರಿಯಾಗಿದ್ದರಿಂದ ಏರ್‌ಶಿಪ್‌ಗಳು ಆರ್ಥಿಕವಾಗಿ ಲಾಭದಾಯಕವಾಗಿರಲಿಲ್ಲ.

### ತಾಂತ್ರಿಕ ಸುಧಾರಣೆಗಳು



ಈ ದುರಂತವು ವಾಯುಯಾನ ತಂತ್ರಜ್ಞಾನದಲ್ಲಿ ಹೊಸ ಸಂಶೋಧನೆಗಳಿಗೆ ದಾರಿಮಾಡಿಕೊಟ್ಟಿತು. ವಿಮಾನಗಳ ತಂತ್ರಜ್ಞಾನವು ತ್ವರಿತವಾಗಿ ಅಭಿವೃದ್ಧಿಗೊಂಡಿತು. ಕೆಲವೇ ವರ್ಷಗಳಲ್ಲಿ ವಿಮಾನಗಳು ದೀರ್ಘ-ದೂರದ ಪ್ರಯಾಣಕ್ಕೆ ಜನಪ್ರಿಯ ಆಯ್ಕೆಯಾದವು.

### ಸಾಮಾಜಿಕ ಮತ್ತು ಮಾಧ್ಯಮದ ಪರಿಣಾಮ

ಈ ದುರಂತವು ಮಾಧ್ಯಮದ ಗಮನವನ್ನು ಸೆಳೆಯಿತು. ರೇಡಿಯೋ, ಚಲನಚಿತ್ರ, ಮತ್ತು ಛಾಯಾಚಿತ್ರಗಳ ಮೂಲಕ ಈ ಘಟನೆಯು ವಿಶ್ವಾದ್ಯಂತ ಚರ್ಚೆಯಾಯಿತು. ಇದು ಜನರಲ್ಲಿ ತಂತ್ರಜ್ಞಾನದ ಸೀಮಿತತೆ ಮತ್ತು ಅಪಾಯಗಳ ಬಗ್ಗೆ ಜಾಗೃತಿಯನ್ನುಂಟುಮಾಡಿತು.

ಹಿಂಡನ್‌ಬರ್ಗ್ ದುರಂತವು ಒಂದು ತಾಂತ್ರಿಕ ವೈಫಲ್ಯದ ಜೊತೆಗೆ ಮಾನವ ಸಾಮರ್ಥ್ಯದ ಮಿತಿಗಳನ್ನು ತೋರಿಸಿತು. ಈ ಘಟನೆಯು ಏರ್‌ಶಿಪ್‌ಗಳ ಯುಗವನ್ನು ಕೊನೆಗೊಳಿಸಿತಾದರೂ, ಇದು ವಾಯುಯಾನದ ಸುರಕ್ಷತೆ ಮತ್ತು ತಂತ್ರಜ್ಞಾನದ ಅಭಿವೃದ್ಧಿಗೆ ಹೊಸ ದಿಕ್ಕನ್ನು ನೀಡಿತು. ಇಂದಿಗೂ ಈ ದುರಂತವು ತಂತ್ರಜ್ಞಾನದ ಬಳಕೆಯಲ್ಲಿ ಸುರಕ್ಷತೆಯ ಮಹತ್ವವನ್ನು ನೆನಪಿಸುವ ಒಂದು ಎಚ್ಚರಿಕೆಯ ಕಥೆಯಾಗಿದೆ.

## ಇತಿಹಾಸದಲ್ಲಿ ಈ ದಿನ

### ಮೇ -6

**857:** ಭಾರತದಲ್ಲಿನ ಪ್ರಥಮ ಸ್ವಾತಂತ್ರ್ಯ ಹೋರಾಟಕ್ಕೆ (ಸಿಪಾಯಿಗಳ ಬಂಡಾಯ) ತೀವ್ರತೆ ಹೆಚ್ಚಾಗುವ ಹಂತ. ಮೇ ತಿಂಗಳಲ್ಲಿ ತೀವ್ರಗೊಂಡ ಈ ಹೋರಾಟದ ಪ್ರಮುಖ ತಾಣಗಳಲ್ಲಿ ಒಂದಾದ ಮೇರಠ್‌ನಲ್ಲಿ ಉರಿಯತ್ತ ಚಲನೆಯನ್ನು ನಡೆಸಲಾಗಿತ್ತು.

**1998:** ದೆಹಲಿಯಲ್ಲಿ ಚರಣ್ ಸಿಂಗ್ ಅವರ ಸ್ಮಾರಕವಾದ ಚರಣ್ ಸಿಂಗ್ ವಿಶ್ವವಿದ್ಯಾಲಯ ಪ್ರಾರಂಭವಾಯಿತು.

**2013:** ಕರ್ನಾಟಕ ವಿಧಾನಸಭೆ ಚುನಾವಣಾ ಫಲಿತಾಂಶ: ಕಾಂಗ್ರೆಸ್ ಪಕ್ಷವು ಭರ್ಜರಿ ಗೆಲುವು ಸಾಧಿಸಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಏರಿದರು.

**ಜನನ**

**1861:** ಮೋತಿಲಾಲ್ ನೆಹರು, ಸ್ವಾತಂತ್ರ್ಯ ಹೋರಾಟಗಾರ ಮತ್ತು ಪಂಡಿತ್ ಜವಾಹರಲಾಲ ನೆಹರು ಅವರ ತಂದೆ.

**1915:** ಒಮ್ ಪ್ರಸಾದ್ ಗುರಂಗ್, ಪ್ರಖ್ಯಾತ ನೆಪಾಳಿ ಭಾಷಾ ಸಾಹಿತಿ ಮತ್ತು ಭಾರತ ಗೋರ್ಖಾ ಸಾಹಿತ್ಯ ಮಂಡಳಿಯ ಸದಸ್ಯ.

**ಮರಣ**

**2002:** ಮುಲ್ಕ್ ರಾಜ್ ಆನಂದ್, ಭಾರತದ ಇಂಗ್ಲಿಷ್ ಸಾಹಿತ್ಯದ ಪ್ರಮುಖ ಲೇಖಕರಲ್ಲಿ ಒಬ್ಬರು. “”Untouchable” ಎಂಬ ಕೃತಿಯಿಂದ ಪ್ರಸಿದ್ಧರಾದವರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248